ಅಸಲು ದಾವೆ ನಂ.97/2022

ಪಿ.ಡಬ್ಲೂಃ 2- ಕೃಷ್ಣಾರೆಡ್ಡಿ ಆರ್.ಜಿ. ಬಿನ್ ಗೋವಿಂದ ರೆಡ್ಡಿ

ದಿನಾಂಕಃ 17/03/2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲು 7 ಮತ್ತು 8 ನೇ ಪ್ರತಿವಾದಿಯರ ಪರವಾಗಿ ಶ್ರೀ ಎಸ್.ಕೆ.ಆರ್. ವಕೀಲರಿಂದ**

3. ವಾದಿಯು ನನಗೆ ದೊಡ್ಡಮ್ಮ ಆಗಬೇಕು ಅಂದರೆ ಅವರು ನನ್ನ ತಾಯಿಯಾದ ಶಾಂತಮ್ಮರವರ ಅಕ್ಕ ಆಗಬೇಕು. ನಮ್ಮ ಕುಟುಂಬದ ಮೂಲ ಪುರುಷ ಗಂಗುಲ ರೆಡ್ಡಿ ಇದ್ದು ಅವರಿಗೆ ಗಂಗಿ ರೆಡ್ಡಿ ಮತ್ತು ವೆಂಕಟರೆಡ್ಡಿ ಎಂಬ ಇಬ್ಬರು ಮಕ್ಕಳು. ಸದರಿ ಗಂಗುಲ ರೆಡ್ಡಿ ರವರ ಹೆಂಡತಿಯ ಹೆಸರು ಮುನಿಯಮ್ಮ. ಸದರಿ ವೆಂಕಟರೆಡ್ಡಿಗೆ 4 ಜನ ಮಕ್ಕಳು ಇರುತ್ತಾರೆ ಆದರೆ ಗಂಗಿ ರೆಡ್ಡಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ವೆಂಕಟರೆಡ್ಡಿ ರವರ ಮಕ್ಕಳ ಹೆಸರು ಗೋಪಾಲ ರೆಡ್ಡಿ ಅಂದರೆ 1 ನೇ ಪ್ರತಿವಾದಿ, ಜಯಮ್ಮ ಅಂದರೆ 1 ನೇ ವಾದಿ, ಶಾಂತಮ್ಮ ಅಂದರೆ 2 ನೇ ವಾದಿ ಮತ್ತು ಆನಂದ ರೆಡ್ಡಿ ಅಂದರೆ 5 ನೇ ಪ್ರತಿವಾದಿ. ಸದರಿ ಗೋಪಾಲರೆಡ್ಡಿ ರವರಿಗೆ ಇಬ್ಬರು ಮಕ್ಕಳು ಇದ್ದು ಅವರು 3 ಮತ್ತು 4 ನೇ ಪ್ರತಿವಾದಿಯಾಗಿರುತ್ತಾರೆ.

4. ದಾವಾ ಸ್ವತ್ತುಗಳಲ್ಲಿ ಈಗ ಒಂದು 7 ನೇ ಪ್ರತಿವಾದಿ, ಒಂದು 9 ನೇ ಪ್ರತಿವಾದಿ, ಒಂದು 5 ನೇ ಪ್ರತಿವಾದಿ ಮತ್ತು ಇನ್ನೊಂದು 6 ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ. ಸದರಿಯವರ ಹೆಸರಿನಲ್ಲಿರುವ ದಾವಾ ಸ್ವತ್ತುಗಳ ದಾಖಲೆಗಳನ್ನು ವಾದಿಯು ಈ ದಾವೆಯಲ್ಲಿ ಹಾಜರುಪಡಿಸಿರುತ್ತಾರೆ. ನನಗೆ 7 ರಿಂದ 9 ನೇ ಪ್ರತಿವಾದಿಯರು ಗೊತ್ತು. ದಾವಾ ಸ್ವತ್ತನ್ನು 1 ನೇ ಪ್ರತಿವಾದಿಯು 7 ನೇ ಪ್ರತಿವಾದಿಗೆ 2007 ರಲ್ಲಿ ಕೊಟ್ಟಿರುತ್ತಾರೆ. ಈ ಕುರಿತು 1 ನೇ ಪ್ರತಿವಾದಿಯು 7 ನೇ ಪ್ರತಿವಾದಿಗೆ ಎರಡು ದಾಖಲೆಗಳನ್ನು ಬರೆದುಕೊಟ್ಟಿರುತ್ತಾರೆ. ಅವುಗಳನ್ನು 2006 ಮತ್ತು 2007 ಬರೆದುಕೊಟ್ಟಿರುತ್ತಾರೆ ಆದರೆ ನನಗೆ ನಿಖರವಾದ ದಿನಾಂಕ ಗೊತ್ತಿರುವುದಿಲ್ಲ. ಸದರಿ ದಾಖಲೆಗಳನ್ನು ಬರೆದುಕೊಡುವಾಗ ಯಾರು ಯಾರು ಹಾಜರಿದ್ದರು ಮತ್ತು ಅವುಗಳಿಗೆ ಯಾರು ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಹೇಳಲು ಬರುವುದಿಲ್ಲ. 1 ನೇ ಪ್ರತಿವಾದಿಯು 7 ನೇ ಪ್ರತಿವಾದಿಗೆ ದಾವಾ ಸ್ವತ್ತನ್ನು ಲೀಜ್ ಆಧಾರದ ಮೇಲೆ ಕೊಟ್ಟಿರುತ್ತಾರೆ ಆದರೆ ಎಷ್ಟು ಮೊತ್ತಕ್ಕೆ ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. 1 ನೇ ಪ್ರತಿವಾದಿಯು ಸ್ವತ್ತನ್ನು 7 ನೇ ಪ್ರತಿವಾದಿಗೆ ಮಾರಾಟ ಮಾಡುತ್ತಿಲ್ಲ ಮತ್ತು ಲೀಜ್ ಮೇಲೆ ಕೊಟ್ಟಿರುತ್ತಾರೆ ಎಂದು 1 ನೇ ಪ್ರತಿವಾದಿಯು ನನಗೆ ತಿಳಿಸಿದ್ದರು. ಎಷ್ಟು ವರ್ಷಕ್ಕಾಗಿ ಲೀಜ್ ಮೇಲೆ ಕೊಡುತ್ತಿದ್ದಾರೆ ಎಂದು ಅವರು ನನಗೆ ಹೇಳಿರುವುದಿಲ್ಲ.

5. 2007 ರಿಂದ ಇಂದಿನವರೆಗೂ 7 ನೇ ಪ್ರತಿವಾದಿಯು ದಾವಾ ಸ್ವತ್ತಿನಲ್ಲಿ ನೀಲಗಿರಿ ಗಿಡಗಳನ್ನು, ರಾಗಿ, ಇತ್ಯಾದಿ ಬೆಳೆಗಳನ್ನು ಬೆಳೆಯುತ್ತಿದ್ದಾರೆ. 1 ನೇ ಪ್ರತಿವಾದಿಯು ಐಟಂ ನಂ.1

ಸ್ವತ್ತನ್ನು 7 ನೇ ಪ್ರತಿವಾದಿಗೆ ಕೊಟ್ಟಿರುತ್ತಾರೆ. 1 ನೇ ಪ್ರತಿವಾದಿಯು ಐಟಂ ನಂ.2 ಸ್ವತ್ತನ್ನು 9 ನೇ ಪ್ರತಿವಾದಿಗೆ ಲೀಜ್ ಮೇಲೆ ಕೊಟ್ಟಿರುತ್ತಾರೆ. ಸದರಿ ಎರಡೂ ಸ್ವತ್ತುಗಳಿಗೆ ಸಂಬಂಧಿಸಿ ಸರ್ಕಾರಕ್ಕೆ ಯಾರು ಕಂದಾಯ ಪಾವತಿಸುತ್ತಿದ್ದಾರೆ ಎಂದು ನಾನು ತಿಳಿದುಕೊಡಿಲ್ಲ. ಸದರಿ ಎರಡೂ ಸ್ವತ್ತುಗಳು 2007 ರಿಂದ 7 ಮತ್ತು 9 ನೇ ಪ್ರತಿವಾದಿಯರ ಸ್ವಾಧೀನದಲ್ಲಿರುತ್ತವೆ ಕಾರಣ ಅವರಿಗೆ ಸ್ವತ್ತುಗಳನ್ನು ಲೀಜ್ ಮೇಲೆ ಕೊಡಲಾಗಿರುತ್ತದೆ. 7 ನೇ ಪ್ರತಿವಾದಿಯು ಐಟಂ ನಂ.1 ಮತ್ತು 2 ಸ್ವತ್ತುಗಳನ್ನು ಖರೀದಿಸಿರುತ್ತಾರೆ ಹೊರತು ಲೀಜ್ ಮೇಲೆ ತೆಗೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

6. ಐಟಂ ನಂ.1 ಮತ್ತು 2 ಸ್ವತ್ತುಗಳ ಪಹಣಿಯು 7 ನೇ ಪ್ರತಿವಾದಿಯ ಹೆಸರಿನಲ್ಲಿ ಬರುತ್ತಿದೆ ಎಂದು ನಮಗೆ 2022 ರಲ್ಲಿ ಗೊತ್ತಾಗಿರುತ್ತದೆ. ವಾದಿಯರನ್ನು ಹೊರತು ಪಡಿಸಿ 7 ನೇ ಪ್ರತಿವಾದಿಯ ಕ್ರಯ ಪತ್ರಕ್ಕೆ ನಮ್ಮ ಕುಟುಂಬದ ಉಳಿದೆಲ್ಲಾ ಸದಸ್ಯರುಗಳು ಸಹಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. 1 ನೇ ವಾದಿಯ ಮದುವೆ 1975 ರಲ್ಲಿ ಆಗಿರಬಹುದು ಮತ್ತು 2 ನೇ ವಾದಿಯ ಮದುವೆ 1978 ರಲ್ಲಿ ಆಗಿರಬಹುದು. 1 ನೇ ವಾದಿಯ ಗಂಡನಾದ ನ್ಯಾತಪ್ಪ ರೆಡ್ಡಿ ರವರು ಕೂಲಿ ಕೆಲಸ ಮಾಡುತ್ತಿದ್ದು ಈಗ ಮರಣ ಹೊಂದಿರುತ್ತಾರೆ. 1 ನೇ ವಾದಿಗೆ 4 ಜನ ಮಕ್ಕಳು ಇದ್ದು ಅವರೆಲ್ಲರೂ ಏನು ಉದ್ಯೋಗ ಮಾಡುತ್ತಿರುತ್ತಾರೆ ಎಂದು ನನಗೆ ಗೊತ್ತು. ಸದರಿ ನ್ಯಾತಪ್ಪರವರ ಹೆಸರಿನಲ್ಲಿ ಯಾವುದೇ ಜಮೀನು ಇರುವುದಿಲ್ಲ.

7. 2 ನೇ ವಾದಿಗೆ 3 ಜನ ಮಕ್ಕಳು ಮತ್ತು ಸದರಿಯವರೆಲ್ಲರೂ ಕೂಲಿ ಮತ್ತು ವ್ಯವಸಾಯ ಮಾಡುತ್ತಾರೆ. 2 ನೇ ವಾದಿಯ ಗಂಡನಾದ ಗೋವಿಂದರೆಡ್ಡಿ ರವರ ಹೆಸರಿನಲ್ಲಿ 11½ ಜಮೀನು ಇರುತ್ತದೆ. ವಾದಿಯರ ಮಕ್ಕಳು ವಿದ್ಯಾಭ್ಯಾಸ ಮಾಡಿ ಒಳ್ಳೆಯ ನೌಕರಿಗಳಲ್ಲಿ ಇರುತ್ತಾರೆ ಮತ್ತು ಅವರು ಕೂಲಿ ಕೆಲಸ ಮಾಡುತ್ತಿಲ್ಲ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿರುವುದರಿಂದ ಪಾಟೀ ಸವಾಲು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

(ಮುಜಫರ್)

ಹಿರಿಯ ಸಿ.ಜೆ. ಮತ್ತು ಪ್ರಧಾನ ಜೆಎಂಎಫ್‌ಸಿ

ಕೆಜಿಎಫ್